


# ‘ಗ್ಯಾಸ್’– ನಿಮ್ಮನ್ನು ಬಾಧಿಸುತ್ತಿದೆಯೆ?

**ಕಂಪೆನಿಗಳು ಆಗಾಗ ಹೊಸ ಉಪಕರಣಗಳನ್ನು ಬಿಡುಗಡೆ ಮಾಡುತ್ತಿರುತ್ತವೆ. ಅದು ನಿಜವಾಗಿಯೂ ಉಪಯುಕ್ತವೇ ಎಂದು ನಮಗೆ ನಾವೇ ಪ್ರಶ್ನಿಸದೇ, ಖರೀದಿಸುತ್ತಾ ಹೋದರೆ ‘ಗ್ಯಾಸ್’ ನಮ್ಮನ್ನು ‘ಪಾಪರ್’ ಮಾಡುವ ಸಾಧ್ಯತೆ ಇದೆ.**

■ ಚಿತ್ರ– ಲೇಖನ: **ಹರೀಶ್ ಹಳೆಮನೆ**

‘ಗಿಯರ್ ಅಕ್ವಿಸಿಷನ್ ಸಿಂಡ್ರೋಮ್’ (Gear Aquisition syndrome) ಹ್ರಸ್ವವಾಗಿ G.A.S ಎನ್ನಲಾಗುತ್ತದೆ. ಛಾಯಾಗ್ರಹಣಕ್ಕೆ ಸಂಬಂಧಪಟ್ಟಂತೆ ಇದು ಒಂದು ದೊಡ್ಡ ರೋಗ. ಹವ್ಯಾಸೀ ಹಾಗೂ ವೃತ್ತಿಪರ ಛಾಯಾಗ್ರಾಹಕ .. ಎಲ್ಲರನ್ನೂ ಬಾಧಿಸುವ ಗೀಳು ಇದು. ಛಾಯಾಗ್ರಹಣ ಮಾತ್ರವಲ್ಲ, ಮೊಬೈಲ್ ಮುಂತಾದ ಗ್ಯಾಜೆಟ್‌ಗಳಿಗೂ ಇದು ಅನ್ವಯಿಸುತ್ತದೆ.

ಛಾಯಾಗ್ರಹಣ ಅಥವಾ ಫೊಟೋಗ್ರಫಿಯ ಆಕರ್ಷಣೆಯೇ ಅಂಥದ್ದು. ಒಮ್ಮೆ ಈ ಕ್ಷೇತ್ರವನ್ನು ಪ್ರವೇಶಿಸಿದರೆ ಮತ್ತೆ ಬಿಡಬೇಕೆಂದು ತೋರುವುದಿಲ್ಲ. ಹೊಸತನ್ನು ಸಾಧಿಸುತ್ತ ಹೋಗಬೇಕೆನ್ನುವ ಇಚ್ಛೆಯಿಂದ ಹೊಸ ಉಪಕರಣಗಳು ಮಾರುಕಟ್ಟೆಗೆ ಬಂದಂತೆಲ್ಲ ಖರೀದಿಸುತ್ತ ಹೋಗುವ ಪ್ರವೃತ್ತಿ ಛಾಯಾಗ್ರಾಹಕರಲ್ಲಿ ಬೆಳೆಯುತ್ತಿದೆ. ಇದನ್ನೇ ‘ಗಿಯರ್ ಅಕ್ವಿಸಿಷನ್ ಸಿಂಡ್ರೋಮ್’ ಎನ್ನುತ್ತಾರೆ.

ಹವ್ಯಾಸಿಗಳಷ್ಟೇ ಅಲ್ಲದೆ, ವೃತ್ತಿಪರರೂ ಈ ಗೀಳಿಗೆ ಬಲಿಯಾಗುತ್ತಿದ್ದಾರೆ. ಖರೀದಿಸಿದ ಕ್ಯಾಮೆರಾ, ಲೆನ್ಸ್‌ಗಳನ್ನು ಮೂಲೆಯಲ್ಲಿರಿಸುವ ಪ್ರವೃತ್ತಿ ಬೆಳೆಯುತ್ತಿದೆ. ಸೆಲ್ಫಿ ಹುಚ್ಚನ್ನು ಯಾವ ರೀತಿ ಗೀಳು ಎಂದುಕೊಳ್ಳುತ್ತೇವೆಯೋ, ಅದೇ ರೀತಿ ಇದನ್ನು ಕೂಡ ವಿದೇಶಗಳಲ್ಲಿ ಗೀಳಾಗಿ ಕಾಣಲು ಪ್ರಾರಂಭಿಸಿದ್ದಾರೆ.

ಗ್ಯಾಸ್ ಹೇಗೆ ಶುರುವಾಗುತ್ತದೆ? ಇತ್ತೀಚೆಗೆ ಬೆಳೆದುಬಂದ ಮೊಬೈಲ್ ಛಾಯಾಗ್ರಹಣ ಕೂಡ ಇದಕ್ಕೆ ಮಹತ್ವದ ಕೊಡುಗೆ ನೀಡುತ್ತಿದೆ. ಮಾರುಕಟ್ಟೆಯಲ್ಲಿ ಹೊಸ ಹೊಸ ಉತ್ಪನ್ನಗಳು ಪ್ರವೇಶಿಸುತ್ತಿವೆ. ಮೆಗಾಪಿಕ್ಸೆಲ್ ಸಮರ ಒಂದು ಹಂತಕ್ಕೆ ಬಂದು ನಿಂತಿದೆ. ಮೊಬೈಲ್‌ಗಳಲ್ಲಿ ಹೊಸ ಹೊಸ ಫೀಚರ್‌ಗಳು ಯುವ ಜನತೆಯನ್ನು ಆಕರ್ಷಿಸುವಂತೆ ಮಾಡಲು ಕಂಪೆನಿಗಳು ವಿವಿಧ ಗಿಮಿಕ್‌ಗಳನ್ನು ಬಿಡುಗಡೆ ಮಾಡುತ್ತಿವೆ. ಸ್ಮಾರ್ಟ್‌ಫೋನ್‌ಗಳಂತೆ ಇತರ ಕ್ಯಾಮೆರಾಗಳ ಸಂಗತಿಯೂ ವಿಭಿನ್ನವೇನಲ್ಲ. ಕ್ಯಾಮೆರಾಗಳಲ್ಲೂ ಮೆಗಾಪಿಕ್ಸೆಲ್ ಸಮರ ಒಂದು ಹಂತಕ್ಕೆ ಬಂದು ನಿಂತಿದೆ.

ಈ ಹಿಂದೆ 15,000 ರೂ. ಕೊಟ್ಟು ಫಿಲ್ಮ್ ಕ್ಯಾಮೆರಾ ಕೊಂಡುಕೊಳ್ಳುವಾತ ವೃತ್ತಿಪರನೇ ಆಗಿರಬೇಕೆಂದು ಊಹಿಸಬಹುದಿತ್ತು. ಈಗಿನ ಕಾಲದಲ್ಲಿ 2,50,000 ರೂ. ಕೊಟ್ಟು ಫುಲ್ ಫ್ರೇಮ್ ಡಿಜಿಟಲ್ ಕ್ಯಾಮೆರಾ ಕೊಳ್ಳುವಾತ ವೃತ್ತಿಪರನೇ ಆಗಿರಬೇಕು ಅಂತೇನಿಲ್ಲ. ಸಾಮಾನ್ಯ ಹವ್ಯಾಸಿಯೊಬ್ಬ ಕೂಡ ಈಗ ಫುಲ್ ಫ್ರೇಮ್ ಕ್ಯಾಮೆರಾಗಳತ್ತ ಗಮನ ಹರಿಸುತ್ತಿದ್ದಾನೆ. ಯಾರು ಯಾರೋ ಹೇಳಿದ್ದಾರೆಂದು ಕೊಂಡುಕೊಳ್ಳುವ ಪ್ರವೃತ್ತಿಯೂ ಇತ್ತೀಚೆಗೆ ಬೆಳೆಯುತ್ತಿದೆ. ಕೆಲವೇ ದಿನಗಳಲ್ಲಿ ಇದು ತನಗೆ ನಿರುಪಯುಕ್ತವೆಂದು ಅನಿಸಲು ಶುರುವಾಗುತ್ತದೆ.

ಹೊಸತನ್ನು ಖರೀದಿಸುವಾಗ ನಿಜವಾಗಿಯೂ ಈ ಉಪಕರಣ ನನಗೆ ಉಪಯುಕ್ತವೇ? ಎಂದು ಯಾರೂ ಚಿಂತಿಸುವುದಿಲ್ಲ. ಅದಕ್ಕೆ ಸರಿಯಾಗಿ